

**Sri. Krishna Prasad**, Principal, Srirama, Degree College Kalladka, addressing the gathering on the occasion of Sri Ganesh Chaturthi Celebration



Teachers' Day Celebration



Inauguration of Newly installed Kabaddimat



Sri Sathya Sai Laksharchana



Prashanthi Kho Kho Team, Winners of CBSE Cluster 10 Kho Kho Championship, qualified for National Level



Students secured First Place in Maths Olympiad, conducted by Sahodaya Kannur





Geetha Sahithya Sambhrama Programme By **Sri Vittal Nayak**, Kalladka

## ಜ್ಞಾನ

ನಲಿನಲಿಯುತ ನಾವು ಕಲಿಯೋಣ
ನಗುನಗುತಾ ನಾವು ಬೆರೆಯೋಣ
ಶಾರದಾ ದೇವಿಗೆ ನಮಿಸೋಣ
ಜ್ಞಾನದೀವಿಗೆ ಹಚ್ಚೋಣ
ಗುರುವಿನ ಪ್ರೇರಣೆ ಪಡೆಯೋಣ
ನಿತ್ಯ ಪಾಠವ ಕಲಿಯೋಣ
ನಾಳೆಯ ಕನಸನು ಕಾಣೋಣ
ನನಸಾಗಿಸಲದನು ಶ್ರಮಿಸೋಣ
ಸಜ್ಜನರ ಸಂಗವ ಮಾಡೋಣ
ಸಾಧಕರು ನಾವಾಗೋಣ
ಕಾಡನು ನಾಡನು ಉಳಿಸೋಣ
ಮಾದರಿ ದೇಶವ ಕಟ್ಟೋಣ
ರಸಋಷಿಗಳ ತಾಣವ ನೋಡೋಣ
ಅವರ ಮಾತಿನ ತತ್ವ ತಿಳಿಯೋಣ
ಜ್ಞಾನವೇ ಹಿರಿದು ಎನ್ನೋಣ
ಅದರ ಸವಿಯನು ಸವಿಯೋಣ

ಸಂಗ್ರಹ: **ಪ್ರೀತಂ ಯಸ್.ಜೆ**
9ನೇ ಬಿ ತರಗತಿ



Ex. Army **Sri. Channabasayya** Chikkamath and Ex. Army **Sri Santhosh** Hiremath being honoured on the occasion of Karigil Vijay Diwas Celebration

## ರಜೆಯಲ್ಲಿ ವಿದ್ಯಾರ್ಥಿಗಳು ಪಾಲಿಸಬೇಕಾದ ದಿನಚರಿ

ಬೆಳಗ್ಗೆ ಬೇಗನೆ (5–30ರಿಂದ 6–00ರ ಒಳಗೆ)ಏಳುವುದು, 'ಕರಾಗ್ರೇ ವಸತೇ ಲಕ್ಷ್ಮೀ' ಶ್ಲೋಕವನ್ನು ಹೇಳಿದ ನಂತರ ನಿತ್ಯ ವಿಧಿಗಳನ್ನು ತೀರಿಸಿ ಸುಪ್ರಭಾತ,ಶ್ಲೋಕಗಳನ್ನು ಭಕ್ತಿಯಿಂದ ದೇವರ ಕೋಣೆಯಲ್ಲಿ ಕುಳಿತು ಹೇಳುವುದು. ಯೋಗಾಸನಗಳನ್ನು ಮಾಡುವುದು, ಕುದಿಸಿ ಆರಿಸಿದ ಬಿಸಿನೀರನ್ನು ಕುಡಿಯುವುದು, ಆಧ್ಯಾತ್ಮಿಕ ಪುಸ್ತಕ, ದಿನಪತ್ರಿಕೆ ಅಥವಾ ನೈತಿಕತೆಗೆ ಸಂಬಂಧಿಸಿದ ಪುಸ್ತಕಗಳನ್ನು ಓದುವುದು. ನಂತರ ಸ್ನಾನ, ಬೆಳಗ್ಗಿನ ಫಲಾಹಾರ (8–00ಗಂಟೆಗೆ) ಸೇವನೆಗೆ ಮೊದಲು ಮಕ್ಕಳು ಕಲಿತಿರುವ ಆಹಾರ ಸೇವನಾ ಮಂತ್ರವನ್ನು ಹೇಳುವುದು. ಅನಂತರ ತಮ್ಮ ಮನೆಕೆಲಸಗಳಲ್ಲಿ ಅವನನ್ನು ಅಗತ್ಯವಾಗಿ ತೊಡಗಿಸಿಕೊಳ್ಳುವುದು. ಮಧ್ಯಾಹ್ನ (12–40ಕ್ಕೆ) ಊಟ, ಸಂಜೆ (4–30ಕ್ಕೆ) ಲಘು ಉಪಾಹಾರ ಹಾಗೂ ರಾತ್ರಿ (8–00ಕ್ಕೆ) ಊಟ ಹೀಗೆ ಇವನ್ನು ಹೊತ್ತು ಹೊತ್ತಿಗೆ ನೀಡಿ ಇತರ ಸಮಯಗಳಲ್ಲಿ ಬೇರಾವುದೇ ತಿಂಡಿ ತಿನಸುಗಳನ್ನು ನೀಡದೇ ಅವರ ದೈಹಿಕ ಆರೋಗ್ಯಕ್ಕೆ ಪ್ರಾಶಸ್ತ್ಯ ನೀಡುವುದು. ಸಂಜೆ ಒಂದು ಗಂಟೆಯಾದರೂ(4–30ರಿಂದ 5–30ರವರೆಗೆ) ಕಡ್ಡಾಯವಾಗಿ ಏನಾದರೂ ಹೊರಾಂಗಣಾ ಆಟ ಆಡಿಸುವುದು. ನಂತರ ಕೈಕಾಲು ತೊಳೆದು (6–00ರಿಂದ 6–30ರವರೆಗೆ) ದೇವರಕೋಣೆಯಲ್ಲಿ ಭಜನೆ, ಪ್ರಾರ್ಥನೆ ಸಲ್ಲಿಸುವುದು. ಆ ಮೇಲೆ 8ಗಂಟೆಯವರೆಗೆ ಮುಂದಿನ ಅಧ್ಯಯನಕ್ಕೆ ಸಹಾಯಕವಾಗುವ ಯಾವುದಾದರೂ ವಿಷಯವನ್ನು ಬರೆಯುವುದು ಅಥವಾ ಓದುವುದು. ಊಟದ ನಂತರ ಟಿ.ವಿ ಅಥವಾ ರೇಡಿಯೋ ವಾರ್ತೆ ಏನಾದರೂ ಇದ್ದಲ್ಲಿ ಸ್ವಯಂ ಕೇಳುವುದು ಅಲ್ಲದೆ ಪುರಾಣ ಕಥೆ, ನೀತಿ ಕಥೆಗಳನ್ನು ಹೇಳಿ ಅಥವಾ ಅವನಿಂದ ಹೇಳಿಸಿ ಕೇಳುವುದು. ರಾತ್ರಿ ಗಂಟೆ 9–30ಕ್ಕೆ ಮೊದಲು ಅಗತ್ಯವಾಗಿ ಮಲಗಿ ಆರಾಮವಾಗಿ ನಿದ್ರಿಸುವುದು. ಮಲಗುವ ಮುನ್ನ "ಕರಚರಣ ಕೃತಂವಾ______" ಶ್ಲೋಕ ಹೇಳುವುದು ನಾಮಸ್ಮರಣೆ ಮಾಡುವುದು.

*"The end of knowledge is Love. The end of education is character."*





# ಪ್ರಶಾಂತಿ

ತ್ರೈಮಾಸಿಕ ಪತ್ರಿಕೆ

ಪ್ರಶಾಂತಿ ವಿದ್ಯಾ ಕೇಂದ್ರ, ಬಾಯಾರು । ಜುಲೈ–ಸೆಪ್ಟೆಂಬರ್ 2018
ಸಂಪುಟ 04 । ಸಂಚಿಕೆ 02 । ಪುಟ 04





72nd Independence Day Celebration





Celebration Of (8th Year) Vidyaganapathi Mahotsava





**Sri. Saji. M. P**, Sub-Inspector Of Police, Manjeshwar, addressing the gathering

**Sri. Naganagoud. S. Patil**, Sub-Inspector of BSF, an Alumnus







Inauguration of Scouts and Guides Patrol Leaders Training Camp by **Smt. Bharathi . J. Shetty**, President, Paivalike Gram Panchayat



Sathya Sai Seva Samithis of Kasaragod And Prashanthi Vidya Kendra Bayar donated Rs, 75000.00 to the District Collector towards the kerala Chief Minister Distress Relief Fund

*"The end of knowledge is Love. The end of education is character."*



## ಸಂಪಾದಕೀಯ

"ಓಂ ಶ್ರೀ ಸಾಯಿರಾಮ್"

'ಗಾಂಧೀಜಿ' ಹಾಗೂ 'ಶಾಸ್ತ್ರೀಜಿ' ಈ ದೇಶ ಕಂಡ ಮಹಾನ್ ನಾಯಕರುಗಳು. ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯ ಈ ಹೋರಾಟಗಾರರ ಶ್ರಮದ ಫಲ ಅಂದರೆ ತಪ್ಪಾಗಲಾರದು. ತತ್ವಾದರ್ಶಗಳಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು; ಅದಕ್ಕಾಗಿಯೇ ತಮ್ಮ ಪ್ರಾಣತ್ಯಾಗವನ್ನು ಮಾಡಿದ ಈ ಮಹಾನ್ ಚೇತನಗಳನ್ನು, ಅವರುಗಳ ಜನ್ಮದಿನದ ಶುಭ ಮಾಸದಲ್ಲಿ ಸ್ಮರಿಸುತ್ತಾ, ನಮ್ಮ ನಮನಗಳನ್ನು ಸಲ್ಲಿಸುತ್ತಿದ್ದೇವೆ.

ಗಾಂಧೀಜಿ ಒಬ್ಬ ವ್ಯಕ್ತಿ ಅಲ್ಲ! ಅವರೊಂದು ವ್ಯಕ್ತಿತ್ವ! ಹಾಗಾಗಿಯೇ ಗಾಂಧೀಜಿ ಅಸ್ತಂಗತರಾಗಿ ದಶಕಗಳೇ ಕಳೆದರು ಅವರ ಬದುಕಿನ ಹೋರಾಟದ ಹೆಜ್ಜೆಯ ಗುರುತು ಇಂದಿಗೂ ಚಿರಸ್ಥಾಯಿ. ಗಾಂಧೀಜಿಯ ನೆನಪು ಪ್ರತಿ ವರುಷ ಕೊನೆಯ ಪಕ್ಷ 'ಸ್ವಾತಂತ್ರ್ಯೋತ್ಸವ' ಅಥವಾ 'ಗಾಂಧಿ ಜಯಂತಿ'ಯಂದು ಮಾಡುತ್ತೇವೆ. ಆದರೆ, ನಿಜವಾಗಿಯೂ ಗಾಂಧೀಜಿ ತತ್ವಾದರ್ಶಗಳು ಪಾಲನೆಯಾಗಿದೆಯೇ? ಪಾಲನೆಯಾಗಿರುತ್ತಿದ್ದರೆ ಗಾಂಧೀಜಿಯನ್ನೇ ಮರೆಸಿಬಿಡುವ ಕ್ರೌರ್ಯ ಇಂದಿಗೂ ನಮ್ಮ ಸಮಾಜದಲ್ಲಿ ಅಸ್ತಿತ್ವದಲ್ಲಿರುತ್ತಿತ್ತೇ? ಹಾಗಾದರೆ ಇದು ಗಾಂಧೀಜಿಯ ತತ್ವಾದರ್ಶಗಳ ಸೋಲೇ? ಅಥವಾ ಗಾಂಧಿ ತಾತ ಬಿಟ್ಟು ಹೋದ ತತ್ವಾದರ್ಶಗಳನ್ನು ಪಾಲಿಸದ ನಮ್ಮ ಸೋಲೇ? ಬಹುಶಃ ಎರಡನೇ ಕಾರಣವೇ ಸರಿಯಾದುದು; ಸರ್ವರು ಸಮ್ಮತಿಸುವಂತಹದು ಅನ್ನುವುದು ನಮ್ಮ ಅಭಿಮತ. ಈ ಸೋಲಿಗೆ ಮೂಲ ಕಾರಣ ನಾವು ನಮ್ಮ ಮೌಲ್ಯಗಳನ್ನು ಹಾಗೂ ಗಾಂಧೀಜಿಯ ತತ್ವಾದರ್ಶಗಳನ್ನು ಸರಿಯಾಗಿ ಮಕ್ಕಳಿಗೆ ಹೇಳಿಕೊಡದೆ ಇರುವುದು. ನಮ್ಮ ಶಿಕ್ಷಣ ವ್ಯವಸ್ಥೆ ಮೆಕಾಲೆಯ ಮಾರ್ಗದರ್ಶನದಂತೆ, ಪಾಶ್ಚಿಮಾತ್ಯವೇ 'ಪರಮೋಚ್ಛವೆಂದು' ತಿಳಿದು, ನಮ್ಮತನವನ್ನು ತುಳಿದು, ಪಾಶ್ಚಾತ್ಯ ಸಂಸ್ಕೃತಿಯ ಅಂಧಾನುಕರಣೆ ಮಾಡಿರುವುದೇ ಮೂಲ ಕಾರಣ. 'ನನ್ನ ಭಾರತ ಭಾರತವಾಗಿಯೇ ಇರಲಿ', ಅದೆಂದಿಗೂ ಪಾಶ್ಚಿಮಾತ್ಯ ಸಂಸ್ಕೃತಿಯ ಸುಳಿಯಲ್ಲಿ ಸಿಲುಕದಿರಲಿ' ಎಂದು ಹೇಳಿದ ಗಾಂಧೀಜಿಯ ಮಾತುಗಳು ನಮಗ್ಯಾರಿಗೂ ಕೇಳಿಸಲಿಲ್ಲ. ಕೇಳಿಸಿಕೊಂಡವರು ಪಾಲಿಸಲಿಲ್ಲ. ಪಾಲಿಸಿದ ಕೆಲವರಿಗೂ ಬೆಲೆ ಸಿಗಲಿಲ್ಲ! ಹಾಗಾಗಿಯೇ ಇಂದಿನ ಶಿಕ್ಷಣ ವ್ಯವಸ್ಥೆ ಜೀವಿಸುವುದನ್ನು ಹೇಳಿಕೊಡುತ್ತಿದೆಯೇ ವಿನಃ ಬದುಕನ್ನು ಕಟ್ಟಿಕೊಡಲಿಲ್ಲ, ಕೈ ತುಂಬ ಸಂಬಳ ತರುವ ಉದ್ಯೋಗಸ್ಥನನ್ನಾಗಿಸಿತೇ ವಿನಃ ಮನುಷ್ಯತ್ವವನ್ನು ಹೊಂದಿರುವ ಮನುಷ್ಯನನ್ನಾಗಿಸಲಿಲ್ಲ.

ಒಂದು ಮರದಿಂದ ಫಲವತ್ತಾದ, ರುಚಿ ರುಚಿಯಾದ ಹಣ್ಣು ಪಡೆಯಬೇಕಾದರೆ ಒಳ್ಳೆಯ ಬೀಜವನ್ನು ಬಿತ್ತುವುದರೊಂದಿಗೆ ಅದರ ಸರಿಯಾದ ಲಾಲನೆ ಪಾಲನೆ ಮಾಡಬೇಕಾದದ್ದು ಅಷ್ಟೇ ಮುಖ್ಯ. ಕೇವಲ ಫಲವತ್ತಾದ ಬೀಜವನ್ನು ಬಿತ್ತಿ ಅದರ ಲಾಲನೆ ಪಾಲನೆ ಮಾಡದಿದ್ದರೆ ಆ ಮರದಿಂದ ರುಚಿಯಾದ ಹಣ್ಣನ್ನು ಪಡೆಯಲು ಸಾಧ್ಯವೇ? ಖಂಡಿತವಾಗಿಯೂ ಇಲ್ಲ. ಮನುಷ್ಯನಾಗಲೀ ಅಥವಾ ಪ್ರಕೃತಿಯಾಗಲೀ ಅದರ ಪೋಷಣೆ ಮಾಡಿದಾಗಲೇ ಅದರ ಅಸ್ತಿತ್ವಕ್ಕೆ ಅರ್ಥ ಬರುವುದು. ಅದರಂತೆಯೇ ಮಕ್ಕಳು ಕೂಡ. ಯಾರಿಂದ ಜನಿಸಿದ್ದೇವೆಯೋ ಅನ್ನುವ ಅಂಶದ ಜೊತೆಗೆ ಎಲ್ಲಿ, ಹೇಗೆ ಬೆಳೆದಿದ್ದಾರೆ ಅನ್ನುವುದು ಆ ಮಗುವಿನ ವ್ಯಕ್ತಿತ್ವ ಹಾಗೂ ಭವಿಷ್ಯವನ್ನು ರೂಪಿಸುತ್ತದೆ. ನಮ್ಮ ಮಕ್ಕಳು ಪ್ರಜ್ಞಾವಂತರಾಗಬೇಕಾದರೆ ಅವರಿಗೆ ಸರಿಯಾದ ಶಿಕ್ಷಣ ಲಭಿಸಬೇಕು. ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವಂತಹ ವಾತಾವರಣ ಸೃಷ್ಟಿಮಾಡಬೇಕು. ಹಾಗಾದ್ದಲ್ಲಿ ಮಾತ್ರ ಮಕ್ಕಳು ಎಲ್ಲಾ ರೀತಿಯಲ್ಲೂ ಯಶಸ್ವಿಗಳಾಗಲು ಸಾಧ್ಯ.

ಆಧುನಿಕ ಶಿಕ್ಷಣದ ಜೊತೆಗೆ ಮೌಲ್ಯಗಳನ್ನು ಮಕ್ಕಳಿಗೆ ತಿಳಿಸುವುದೆ ನಮ್ಮ ಶಿಕ್ಷಣದ ಧ್ಯೇಯ. ನಮ್ಮಲ್ಲಿ ವಿದ್ಯಾರ್ಜನೆ ಮಾಡುವ ಮಕ್ಕಳು ಬುದ್ಧಿವಂತರಾಗಬೇಕು. ಹಾಗೆಯೇ ಚಾರಿತ್ರ್ಯವಂತರಾಗಬೇಕು ಅನ್ನುವುದು ನಮ್ಮ ಇಂಗಿತ. ಮೌಲ್ಯಗಳೊಂದಿಗೇ ಎಂದಿಗೂ ರಾಜಿಯಾಗದ ನಾವು, ಕಳೆದ ನಾಲ್ಕು ತಿಂಗಳುಗಳಲ್ಲಿ ಕೆಲವೊಂದು ವಿದ್ಯಾರ್ಥಿಗಳು ಅಶಿಸ್ತಿನಿಂದ ವರ್ತಿಸಿದ್ದರಿಂದ ಕೆಲವು ಕಠಿಣ ನಿರ್ಧಾರವನ್ನು ಕೈಗೊಳ್ಳಬೇಕಾದ ಸಂದರ್ಭ ಒದಗಿ ಬಂದಿದೆ. ಒಂದಿಬ್ಬರು ವಿದ್ಯಾರ್ಥಿಗಳನ್ನು ಅಲ್ಪಾವಧಿಗೆ ಸಸ್ಪೆಂಡ್ ಮಾಡುವುದರೊಂದಿಗೆ, ಇನ್ನುಳಿದ ವಿದ್ಯಾರ್ಥಿಗಳ ಪೋಷಕರನ್ನು ಕರೆಸಿ ಮಕ್ಕಳಿಗೆ ಬುದ್ಧಿಹೇಳಬೇಕಾದ ಪ್ರಸಂಗ ಸೃಷ್ಟಿಯಾಗಿತ್ತು. ಮಕ್ಕಳ ಈ ತಪ್ಪುಗಳು 'ಸರ್ವೇ ಸಾಮಾನ್ಯ'ವೆಂದು ಕೆಲವರಿಗೆ ಅನಿಸಿರಬಹುದು. ಆದರೆ, ತಿಳಿದೋ ಅಥವಾ ತಿಳಿಯದೆಯೋ ಮಾಡುವ ತಪ್ಪನ್ನು ಸಣ್ಣದೆಂದು ಕ್ಷಮಿಸಿ ಮರೆತುಬಿಟ್ಟರೆ, ಮುಂದೊಂದು ದಿನ ಈ ಸಣ್ಣ ತಪ್ಪುಗಳೇ ದೊಡ್ಡ ತಪ್ಪಿಗೆ ನಾಂದಿಯಾದೀತು. ಗಾಂಧೀಜಿ ಬಾಲ್ಯದಲ್ಲಿ ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳದಿರುತ್ತಿದ್ದರೆ ಮಹಾತ್ಮರಾಗುತ್ತಿರಲಿಲ್ಲ. ತಪ್ಪುಗಳು ಮಾಡುವುದು ಸಹಜ ಆದರೆ ಆ ತಪ್ಪುಗಳನ್ನು ತಿದ್ದಿಕೊಂಡು ಮರುಕಳಿಸದಂತೆ ಜಾಗ್ರತೆವಹಿಸಿ ಸನ್ಮಾರ್ಗದಲ್ಲಿ ಮುನ್ನಡೆಯುವುದೇ ಶ್ರೇಷ್ಠತನ ಎಂದು ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕಾದುದು ನಮ್ಮ ಕರ್ತವ್ಯ. ಅಶಿಸ್ತಿನ ವಿಷಯದಲ್ಲಿ ಕಠಿಣ ನಿರ್ಧಾರವನ್ನು ಕೈಗೊಂಡರೂ ನಮ್ಮ ಯಾವುದೇ ನಿರ್ಧಾರಗಳು ನಮ್ಮ ಮಕ್ಕಳ ಭವಿಷ್ಯಕ್ಕೆ ಪೂರಕವೇ ಹೊರತು ಮಾರಕವಲ್ಲ ಅನ್ನುವ ಭರವಸೆ ನೀಡುತ್ತೇವೆ.

ಈ ಸಂಚಿಕೆ ನಿಮ್ಮ ಕೈಯಲ್ಲಿರುವ ಹೊತ್ತಿಗೆ ದಸರಾ ರಜೆ ಆರಂಭವಾಗಿರುತ್ತದೆ. ಸದಾ ಓದು ಬರಹದಲ್ಲಿಯೇ ಕಳೆದು ಹೋಗಿರುತ್ತಿದ್ದ ಮಕ್ಕಳಿಗೆ ಸ್ವಲ್ಪ ವಿರಾಮ ಪಡೆಯುವ ಸಮಯ. ಹಾಗಂತ ಕಲಿಕೆಯಿಂದ ಅಥವಾ ಓದು ಬರಹದಿಂದ ಸಂಪೂರ್ಣವಾಗಿ ವಿಮುಖರಾಗುವುದು ಒಳ್ಳೆಯದಲ್ಲ. ನಿಮ್ಮ ಪಿತೃ–ಮಾತೃ ವಾತ್ಸಲ್ಯವು ಮಕ್ಕಳ ರಜಾ ಜೀವನ ಹಾಸ್ಟೆಲ್ ಜೀವನಕ್ಕೆ ವ್ಯತಿರಿಕ್ತವಾಗದಂತೆ ಗಮನವಹಿಸಿ. ಮಕ್ಕಳು ರಜಾದಿನಗಳಲ್ಲಿ ಪಾಲಿಸಬೇಕಾದ ದಿನಚರಿಯನ್ನು ಕೊನೆಯ ಪುಟದಲ್ಲಿ ಪ್ರಕಟಿಸಿದ್ದೇವೆ. ಅದನ್ನು ಸರಿಯಾಗಿ ನಿಮ್ಮ ಮಕ್ಕಳು ಅನುಸರಿಸುವಂತೆ ನೋಡಿಕೊಳ್ಳಿ. ಕೊನೆಯದಾಗಿ, ನವರಾತ್ರಿ ಉತ್ಸವವು ನಮ್ಮೆಲ್ಲರ ಜೀವನದಲ್ಲಿ ಸಂತಸವನ್ನು ತರಲಿ, ಹಾಗೆಯೇ ದೇವಿಯ ಆಶೀರ್ವಾದ, ಕೃಪೆ ನಮ್ಮೆಲ್ಲರ ಮೇಲಿರಲಿ ಎಂದು ಹಾರೈಸುತ್ತೇವೆ.

ಸಂಚಾಲಕರು
**ಶ್ರೀ ಹೆಚ್. ಮಹಾಲಿಂಗ ಭಟ್**

---

School is something which with a person is attached emotionally the most. It's the place where a person spends the golden phase of his life and moulds himself. And it makes me feel immensely happy to have spent nearly last 1260 days of my life in Prashanthi. It's a place where the students enter as ores from whom the 'gangue' is removed and are made minerals with the potential to serve the country. Morality and spirituality are the very breath of school which have helped me grow morally as well as intellectually.

Initially I used to feel that the time table was rigid and heavy, but as the days rolled down I was convinced that 'An Idle mind is a devil's workshop'. And that's why the school time table is designed to keep students ever engaged. This has taught me a great lesson: to keep myself busy all the time and doing something worth. I am ever grateful to my school.

**Abhishek B.H**
XA

**Prashanthi life is a golden life**



I received an opportunity to do my schooling in PRASHANTHI VIDYA KENDRA.

My school days where unforgettable and in fact those days where the most happiest, & fruitful days in my life.

I proudly feel that I cherished every moment of my school days.

PRASHANTHI VIDYA KENKRA is much beyond just an "Institution"…It actually denotes a "Culture"…Culture of excellence, empowerment, and enrichment.

Im very happy to be a member of PRASHANTHI family.

**-Navaneeth G Rao**



---

## ನೀನಿಲ್ಲದೆ ಏನಿಲ್ಲ (ತಾಯಿ)



ನೀನೇ ಎಲ್ಲ ಅಮ್ಮ ನೀನೇ ಎಲ್ಲ
ನೀನಿಲ್ಲದ್ದಿದ್ದರೆ ನನಗೆ ಜೀವನವಿರುತ್ತಿರಲಿಲ್ಲ
ನೀನೇ ನನ್ನ ಮೊದಲ ಗುರುವು
ನೀನೇ ನನ್ನ ಮೊದಲ ದೈವವು.

ತಪ್ಪಿ ನಡೆದರೆ ಸರಿ ದಾರಿ ತೋರುವೆ
ಅಕ್ಕರೆಯಿಂದ ಬುದ್ಧಿಮಾತ ಹೇಳುವೆ
ನನ್ನ ಮನಸ್ಸಿನ ಭಯವನ್ನು ಹೋಗಲಾಡಿಸುವೆ
ನಿನ್ನ ಪ್ರೀತಿಗೆ ಸರಿಸಾಟಿ ಯಾವುದಮ್ಮ

ನವ ಮಾಸವ ಹೊತ್ತು ನೀಡಿದೆ ನನಗೆ ಜನ್ಮ
ನಿನ್ನ ಋಣ ತೀರಿಸಲು ಸಾಕಾಗದು ನನ್ನ ಈ ಜನ್ಮ
ನನ್ನ ಬದುಕಿನ ಮೂರ್ತಿಯನ್ನು ಕೆತ್ತಿದ ಶಿಲ್ಪಿ ನೀನು
ಬದುಕಿನುದ್ದಕ್ಕೂ ಬದುಕುವೆ ನಿನ್ನ ಹೆಮ್ಮೆಯ ಮಗನಾಗಿ ನಾನು

ರಚಿಸಿದವರು
**ಕಶ್ಯಪ. ಹೆಚ್. ಹೆಚ್**
10ನೇ ತರಗತಿ

## ಗುರಿ

ಕನಸ್ಸೆಂಬುದು ಎಲ್ಲರ ಜೀವನದಲ್ಲೂ ಇದ್ದೇ ಇರುವಂತಹದ್ದೇ. ನಾವು ನಮ್ಮ ಜೀವನದ ಬಗ್ಗೆ ಹಲವಾರು ಆಸೆಗಳನ್ನಿಟ್ಟುಕೊಂಡಿರುತ್ತೇವೆ. ಇಂದಿನ ಈ ಆಧುನಿಕ ಯುಗದಲ್ಲಿ ಸ್ಪರ್ಧಾತ್ಮಕವಾಗಿರುವುದು ಬಹುಮುಖ್ಯ . ಆದ್ದರಿಂದ ನಮ್ಮ ಮುಂದಿನ ಭವಿಷ್ಯದ ಲೆಕ್ಕಾಚಾರ ಹಾಕಿಡುವುದು ಅಗತ್ಯ. ಹಾಗೆ ಜೀವನದಲ್ಲಿ ಒಂದು ಶ್ರೇಷ್ಠ ಗುರಿ ಹೊಂದುವುದು ಅತ್ಯಗತ್ಯ.

ನಾವು ಹಲವಾರು ಸಲ ಅದಾಗಬೇಕು, ಇದಾಗಬೇಕು ಎಂದು ಇಚ್ಛಿಸಿರುತ್ತೇವೆ. ಉದಾಹರಣೆಗೆ ದೂರದರ್ಶನದಲ್ಲಿ ಒಬ್ಬ ನಟನ ನೋಡಿದರೆ ಚಿತ್ರರಂಗದೆಡೆಗೆ ಹೋಗಲು ನಮ್ಮ ಮನಸ್ಸು ಓಲೈಸುತ್ತದೆ, ಹಾಗೆ ಸಚಿನ್‌ರನ್ನು ನೋಡಿದರೆ ನಮಗೆ ಒಬ್ಬ ಕ್ರಿಕೆಟಿನಾಗಲು ಇಚ್ಛೆಯಾಗುತ್ತದೆ. ಆದರೆ ಇಚ್ಛೆಗೂ, ಗುರಿಗೂ ಮಹತ್ತರವಾದೊಂದು ವ್ಯತ್ಯಾಸವಿದೆ. ಇಚ್ಛೆ ಎಂಬುದು ಬರೀ ಕ್ಷಣಿಕ ಮಾತ್ರ. ಆಗಿನ ಸಂದರ್ಭಕ್ಕನುಗುಣವಾಗಿ ನಮ್ಮ ಮನಸ್ಸಿಗೆ ಹಲವಾರು ಆಸೆಗಳು ಬರುತ್ತವೆ. ಆದರೆ ಕನಸು ಅಥವಾ ಗುರಿ ಎಂಬುದು ದೃಢವಾದೊಂದು ನಿರ್ಧಾರ, ನನ್ನ ಜೀವನವೆಂಬುದು ಹೀಗಿರಬೇಕೆಂಬ ಸಂಕಲ್ಪ.

ನಾವು ಸದಾ ಒಂದು ನಿರ್ದಿಷ್ಟವಾದ, ನಿಖರವಾದೊಂದು ಗುರಿಯನ್ನು ಜೀವನದಲ್ಲಿಟ್ಟುಕೊಳ್ಳಬೇಕು, ಅದು ನಮ್ಮ ಬಲಗಳನ್ನು ಅರಿತು ನಿರ್ಧರಿಸಿದ್ದಾಗಿರಬೇಕು, ಹೊರತು ಯಾರೋ ಹೇಳಿದುದರ ಮೇಲೆಲ್ಲ. ಸದಾ ಒಂದು ಕಷ್ಟದ ಗುರಿಯಿಟ್ಟುಕೊಳ್ಳಿ ಅದು ನಿಮ್ಮನ್ನು ಜೀವನದಲ್ಲಿ ಉದಾಸೀನದಿಂದ ದೂರವಿರುವಂತೆ ನೋಡಿಕೊಳ್ಳುತ್ತದೆ. ಬರೀ ಕನಸೊಂದನ್ನು ಇಟ್ಟುಕೊಂಡು 'ನನ್ನ ಕನಸು ನನಸಾಗಲಿ' ಎಂದು ಕೂತರೆ ಸಾಲದು, ಬದಲಿಗೆ ಅದನ್ನು ನನಸಾಗಿಸುವ ಛಲ ನಮ್ಮದಾಗಬೇಕು, ಅದನ್ನು ಸಾಧಿಸಲು ನಾವು ಕಂಕಣಬದ್ಧರಾಗಬೇಕು. ಕ್ರಿಯಾಶೀಲರಾಗಬೇಕು.

ಪ್ರತಿಕ್ಷಣವೂ ನಾವು ನಮ್ಮ ಗುರಿಯನ್ನು ನೆನೆಯುತ್ತಿರಬೇಕು ಅಂದಾಗ ಮಾತ್ರ ಅದನ್ನು ಸಾಧಿಸುವ ಜ್ವಾಲೆ ನಮ್ಮಲ್ಲಿ ಸದಾ ಉರಿಯುತ್ತಿರುತ್ತದೆ. ಕೈ ಕೆಸರಾಗದೆ ಬಾಯಿ ಮೊಸರಾಗದು. ಕಷ್ಟ ಪಡದೆ ಫಲವಿಲ್ಲ. ಆದ್ದರಿಂದ ನಮ್ಮ ಗುರಿಯನ್ನು ನಾವು ತಲುಪುವ ದಾರಿಯಲ್ಲಿ ಯಾವುದೇ ಕಷ್ಟ ಎದುರಾದರೂ ಅದನ್ನು ಎದುರಿಸುವ ನಂಬಿಕೆ ನಮ್ಮಲ್ಲಿರಬೇಕು. ಕಷ್ಟಕ್ಕೆ ಹೆದರಿ ಹಿಂಜರಿಯುವ ಹೇಡಿಗಳು ನಾವು ಆಗ ಬಾರದು.

ನಮ್ಮ ಜೀವನ ನಮ್ಮ ಕೈಯಲ್ಲಿದೆ ಅದನ್ನು ರೂಪಿಸಿಕೊಳ್ಳುವಂತಹದ್ದು ನಮ್ಮ ಮೇಲೆ ಬಿಟ್ಟಿರುವಂತಹದ್ದು. ಶ್ರಮವಹಿಸಿ ನಾವು ಜೀವನವನ್ನು ಹೊನ್ನಾಗಿಸಲು ಪ್ರಯತ್ನಿಸಬೇಕು. ಅದೇ ಇಂದಿನ ಆಧುನಿಕ ಕಾಲದ ತತ್ವ.

**– ಅಭಿಷೇಕ್. ಬಿ.ಹೆಚ್**
10ನೇ ತರಗತಿ

## ವಿಶ್ವ ಪ್ರಸಿದ್ಧ ವ್ಯಕ್ತಿಗಳ ನುಡಿ ಮುತ್ತುಗಳು

- ಕಾಯಾ, ವಾಚಾ, ಮನಸಾ ಸಂಪೂರ್ಣ ಸಾಧಿಸುವ ಗುರಿ ಇಟ್ಟುಕೊಳ್ಳಿ. ನಿಮ್ಮ ಚಿಂತನೆಯನ್ನು ಪವಿತ್ರಗೊಳಿಸಲು ಪ್ರಯತ್ನಿಸಿ. ಅದರಿಂದ ಎಲ್ಲವೂ ಒಳ್ಳೆಯದಾಗುತ್ತದೆ – ಮಹಾತ್ಮಾ ಗಾಂಧೀಜಿ
- ಜೀವನದಲ್ಲಿ ತತ್ವ ಮತ್ತು ಸಿದ್ಧಾಂತಗಳನ್ನು ಮರೆತಾಗ ಸೋಲು ಎದುರಾಗುತ್ತದೆ –ಜವಾಹರ್ ಲಾಲ್ ನೆಹರು
- ಯಾವುದು ಪ್ರಪಂಚದೊಂದಿಗೆ ನಮ್ಮನ್ನು ಒಂದುಗೂಡಿಸುವುದೋ ಅದೆಲ್ಲಾ ಪುಣ್ಯ: ಯಾವುದು ಪ್ರತ್ಯೇಕಿಸುವುದೋ ಅದೇ ಪಾಪ – ಸ್ವಾಮಿ ವಿವೇಕಾನಂದ
- ಸ್ವಾರ್ಥವನ್ನು ಗೆದ್ದವನು, ಶಾಂತಿಯನ್ನು ಪಡೆದವನು ಮತ್ತು ಸತ್ಯವನ್ನು ತಿಳಿದವನು ನಿಜವಾಗಿಯೂ ಸುಖಿ – ಗೌತಮ ಬುದ್ಧ
- ದಾನದಲ್ಲಿ ಶ್ರೇಷ್ಠ ಪ್ರಾಣದಾನ. ದೇಶಕ್ಕಾಗಿ ಪ್ರಾಣದಾನ ಅತಿ ಶ್ರೇಷ್ಠ –ಸುಭಾಸ್ ಚಂದ್ರ ಬೋಸ್
- ನಿಂದಿಸುವನೊಬ್ಬ ಸ್ತುತಿಸುವನೊಬ್ಬ. ಇವರಿಬ್ಬರು ನಮ್ಮ ಶಿವಯೋಗಿಯ ಪರಮ ಬಂಧುಗಳಯ್ಯ– ಬಸವಣ್ಣ

ಸಂಗ್ರಹ:– **ಪವನ. ಎಸ್ ಭಟ್**
10ನೇ ತರಗತಿ